ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).-
ಅ) ಹೌದು.
ಆ) ಹೌದು ಪರಿಶೀಲನೆಯಲ್ಲಿದೆ.

ವಿಷಯ : ತಂಬ್ರಳ್ಳಿ ಏತ ನೀರಾವರಿ ಯೋಜನೆ.

ಪ್ರಶ್ನೆ : 191 (339) ಶ್ರೀ ಕೆ. ಚೆನ್ನಬಸವನಗೌಡ(ಕೂಡ್ಲಿಗಿ).— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಗರಿ ಬೊಮ್ಮನಹಳ್ಳಿ ತಾಲ್ಲೂಕು ತಂಬ್ರಳ್ಳಿ ಏತ ನೀರಾವರಿ ಯೋಜನೆ ಕೆಳಗೆ ಸದಾ ಅಚ್ಚುಕಟ್ಟಿನ ಮಡಿಭಾಗದ ಕೃಷ್ಣಾಪುರ ಗ್ರಾಮದ ಅಚ್ಚುಕಟ್ಟಿಗೆ ನೀರು ಸರಬರಾಜಾಗದೆ ಇದ್ದರೂ ಸಹ ನೀರಿನ ತೆರಿಗೆ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಕೃಷ್ಣಾಪುರ ಗ್ರಾಮದ ಅಚ್ಚುಕಟ್ಟಿಗೆ ಒಂದು ಪ್ರತ್ಯೇಕ ಕಾಲುವೆ ನಿರ್ಮಾಣವಾದರೆ ಈ ತೊಂದರೆ ನಿವಾರಣೆಯಾಗುವುದೆಂದು ಪ್ರತ್ಯೇಕ ಕಾಲುವೆ ಅಂದಾಜು ಮಂಜೂರಾಗಿದ್ದರೂ ಸಹ ಅದನ್ನು ಸರ್ಕಾರದವರು ಕಾರ್ಯಗತ ಮಾಡದಿರುವುದಕ್ಕೆ ಕಾರಣವೇನು ;

ಇ) ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಏಣ್ಣಿಗಿ ಏತ ನೀರಾವರಿ ಅಚ್ಚುಕಟ್ಟುದಾರರ ಜಮೀನಿಗೆ ಸರಿಯಾಗಿ ನೀರು ಸರಬರಾಜಾಗದೆ ಮತ್ತು ಬೆಳೆ ಬಾರದೆಯಿದ್ದರೂ ಸಹ ನೀರಿನ ತೆರಿಗೆಯನ್ನು ಕಡ್ಡಾಯವಾಗಿ ಹಾಗೂ ಬಲಾತ್ಕಾರವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಈ) ಹಡಗಲಿ ತಾಲ್ಲೂಕು ನಾಲ ಏತ ನೀರಾವರಿ ಅಚ್ಚುಕಟ್ಟಿಗೆ ಸಂಬಂಧಿಸಿದ ಮೋಟಾರು ಹಿಂದಿನ ವರ್ಷ 8 ಭಾರಿ ಸುಟ್ಟು ರೈತರಿಗೆ ನೀರು ಸರಬರಾಜು ಮಾಡದೆ ನೀರಿನ ತೆರಿಗೆ ವಸೂಲಿ ಮಾಡುತ್ತಿರುವುದು ಸೂಕ್ತವೇ ;

ಉ) ಸದರಿ ಪರಿಹಾರಗಳನ್ನು ಪರಿಶೀಲಿಸಲು ನೀರಿನ ಇಲಾಖೆಯವರು ತಹಸೀಲ್ದಾರರು ಮತ್ತು ಕೃಷಿ ಇಲಾಖೆಯವರು ಅಚ್ಚುಕಟ್ಟನ್ನು ಪರಿಶೀಲಿಸಿ ಸೂಕ್ತವೆಂದು ಕಂಡು ಬಂದಲ್ಲಿ ಹಿಂದಿನ ತೆರಿಗೆಯನ್ನು ಮಾಫಿ ಮಾಡಿ ಮುಂದೆ ಈ ತೊಂದರೆಗಳಾಗದಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಉತ್ತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ನೀರು ತೆಗೆದುಕೊಂಡ ಜಮೀನುಗಳಿಗೆ ಮಾತ್ರ ನೀರಿನ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಆ) ಈಗ ಹಾಲಿ ಇರುವ ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯುತ್ತಿರುವುದರಿಂದ ಪ್ರತ್ಯೇಕ ಕಾಲುವೆಯ ಅವಶ್ಯಕತೆ ಇರುವುದಿಲ್ಲ.

ಇ) ಸದರಿ ಯೋಜನೆಯ ಅಚ್ಚುಕಟ್ಟುದಾರರ ಜಮೀನುಗಳಿಗೆ ನೀರು ಸರಬರಾಜು ಆಗುತ್ತಿದ್ದು ಅಂಥಹ ಜಮೀನುಗಳಿಗೆ ಮಾತ್ರ ನೀರಿನ ತೆರಿಗೆ ವಿಧಿಸಲಾಗುತ್ತಿದೆ.

ಈ) ಈ ಯೋಜನೆಯಿಂದ ಹೋದವರ್ಷ ಹಿಂಗಾರು ಬೆಳೆಗೆ ನೀರು ಒದಗಿಸುವಾಗ ಮೋಟಾರು 4 ಭಾರಿ ಸುಟ್ಟಿದ್ದರಿಂದ ನೀರು ಒದಗಿಸುವಲ್ಲಿ ತೊಂದರೆಯಾಯಿತು. ಕಾಲ ಕಾಲಕ್ಕೆ ರಿಪೇರಿ ಮಾಡಿಸಿ ನೀರನ್ನು ಒದಗಿಸಲಾಯಿತು. ಆದುದರಿಂದ ನೀರು ತೆಗೆದುಕೊಂಡವರಿಗೆ ಮಾತ್ರ ನೀರಿನ ತೆರಿಗೆ ವಿಧಿಸಲಾಗಿದೆ.

ಉ) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಹಗರಿ ಬೊಮ್ಮನಹಳ್ಳಿ ಯೋಜನೆಯ ಬಗ್ಗೆ.

ಪ್ರಶ್ನೆ : 192 (328) ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿ ಜಲಾಶಯ ನಿರ್ಮಾಣ ಮಾಡಲು 4 ಕೋಟಿ ರೂಪಾಯಿಗಳು ವೆಚ್ಚವಾಗಿದ್ದು 2 ವರ್ಷದಿಂದ ಮಳೆ ಬಾರದಿರುವುದರಿಂದಾಗಿ ಈ ಜಲಾಶಯ ನಿರುಪಯೋಗವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಸದರಿ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವಂತೆ ಭದ್ರಾ ಜಲಾಶಯದ ಕಾಲುವೆ ನೀರನ್ನು ಚಿಕ್ಕ ಹಗರಿಗೆ ಬಿಡುವ ಮೂಲಕ ಸದರಿ ಜಲಾಶಯವನ್ನು ತುಂಬುವ ವ್ಯವಸ್ಥೆಯನ್ನು ಸರ್ಕಾರದವರು ಕೈಗೊಳ್ಳುವರೇ ;

ಇ) ಸದರಿ ಜಲಾಶಯಕ್ಕೆ ಸಮೃದ್ಧಿಯಾಗಿ ನೀರು ಬರುವಂತೆ ಕ್ರಮ ಕೈಗೊಳ್ಳಲಾಗುವುದೇ ;

ಈ) ಸದರಿ ಜಲಾಶಯದ ಅಂಗಳದಲ್ಲಿ 10-20 ಕೊಳವೆಗಳನ್ನು ಹಾಕಿಸಿ ಅದರಿಂದ ಉಕ್ಕಿ ಬರುವ ನೀರಿನಿಂದ ಜಲಾಶಯವನ್ನು ತುಂಬಿಸುವ ಏರ್ಪಾಡನ್ನು ಸರ್ಕಾರವು ಪತಿಯಿಂದ ಮಾಡಲಾಗುವುದೇ ;

ಉ) ಭದ್ರಾ ಜಲಾಶಯದ ಕೋಡಿ ನೀರು ಹರಿಹರದ ಸಮೀಪ ಕರ್ಲಹಳ್ಳಿ, ತೆಲಗಿ, ದುಗ್ಗತ್ತಿ ಹತ್ತಿರ ಸಂಗ್ರಹಿಸಲ್ಪಟ್ಟಿದ್ದು ಸದರಿ ನೀರಿನ ಮಟ್ಟವು ಕಡಿಮೆ ಇದ್ದು ಹಗರಿಯು ಎತ್ತರ ಇರುವುದ